I/435532/2023

**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ,ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012**

**ಇ-ಮೇಲ್:commissioner.pue@gmail.com ಸ್ಥಿರ ದೂರವಾಣಿ ಸಂ:080-23562033**

ಸಂಖ್ಯೆ: E- 888441 DPUE-EST3/2/2022

ದಿನಾಂಕ: 03-06-2023

## ಸುತ್ತೋಲೆ

ವಿಷಯ: ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರಿಗೆ ಅಧಿಕಾರ ಪ್ರತ್ಯಾಯೋಜಿಸುವ ಬಗ್ಗೆ.

ಉಲ್ಲೇಖ:
1. ಈ ಕಚೇರಿಯ ಏಕ ಕಡತ ಸಂಖ್ಯೆ:DPUE-EST3/2/2022-R AND G
2. ಸರ್ಕಾರದ ಆದೇಶ ಸಂಖ್ಯೆ: ಇಡಿ 31 ಟಿಪಿಯು 2023 (ಭಾಗ-1) , ದಿ:17-05-2023

-*-

ಪದವಿ ಪೂರ್ವ ಶಿಕ್ಷಣ ಇಲಾಖೆಯ ಬೋಧಕ ಮತ್ತು ಬೋಧಕೇತರ ಅಧಿಕಾರಿ/ಸಿಬ್ಬಂದಿಗಳಿಗೆ ಕೆಲವು ಸೇವಾ ಸೌಲಭ್ಯಗಳ ಮಂಜೂರಾತಿ ಅಧಿಕಾರವನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ಆಯಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಪ್ರತ್ಯಾಯೋಜಿಸಿ ಆದೇಶ ಹೊರಡಿಸುವಂತೆ ಉಲ್ಲೇಖ-1 ರ ಏಕ ಕಡತದಲ್ಲಿ ಸರ್ಕಾರವನ್ನು ಕೋರಲಾಗಿರುತ್ತದೆ. ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ, ಉಲ್ಲೇಖ-2 ರನ್ವಯ ಕೆಲವು ಅಧಿಕಾರವನ್ನು ಆಯಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಪ್ರತ್ಯಾಯೋಜಿಸಿ ಆದೇಶ ಹೊರಡಿಸಿರುತ್ತದೆ. ಸರ್ಕಾರದ ಆದೇಶದಲ್ಲಿನ ಸೂಚನೆಗಳನ್ನು ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳು ಕಟ್ಟು ನಿಟ್ಟಾಗಿ ಪಾಲಿಸುವಂತೆ ಸೂಚಿಸಿದೆ. ಸರ್ಕಾರದ ಆದೇಶದ ಪ್ರತಿಯನ್ನು ಮುಂದಿನ ಅಗತ್ಯ ಕ್ರಮಕ್ಕಾಗಿ ಈ ಸುತ್ತೋಲೆಯೊಂದಿಗೆ ಲಗತ್ತಿಸಿದೆ.

**Signed by Sindhu B Rupesh**
**Date: 03-06-2023 17:21:10**

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಇವರಿಗೆ:**

ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ.

**ಪ್ರತಿಯನ್ನು:**

1. ನಿರ್ದೇಶಕರು / ಜಂಟಿ ನಿರ್ದೇಶಕರು (ಆಡಳಿತ) / (ಮಾನ್ಯತೆ ಮತ್ತು ಅನುದಾನ) / (ಶೈಕ್ಷಣಿಕ) - ಇವರ ಆಪ್ತ ಶಾಖೆಗೆ.
2. ಉಪ ನಿರ್ದೇಶಕರು (ಆಡಳಿತ) / (ಮಾನ್ಯತೆ ಮತ್ತು ಅನುದಾನ) / (ಶೈಕ್ಷಣಿಕ) / (ಮೂಲಭೂತ ಸೌಕರ್ಯ).
3. ಸಹಾಯಕ ನಿರ್ದೇಶಕರು (ಲೆಕ್ಕ ಪತ್ರ) / ಲೆಕ್ಕಾಧಿಕಾರಿ (ಲೆಕ್ಕ ಪತ್ರ ಶಾಖೆ).
4. ಸಹಾಯಕ ನಿರ್ದೇಶಕರು (ಇ-ಆಡಳಿತ)-ಸುತ್ತೋಲೆಯನ್ನು ಇಲಾಖಾ ಜಾಲತಾಣದಲ್ಲಿ ಪ್ರಕಟಿಸುವುದು ಹಾಗೂ ಎಲ್ಲಾ ಜಿಲ್ಲಾ ಉಪನಿರ್ದೇಶಕರ ಕಚೇರಿಗೆ ಮಿಂಚಂಚೆ ಕಳುಹಿಸುವುದು.
5. ಪದವಿ ಪೂರ್ವ ಶಿಕ್ಷಣ ಇಲಾಖೆಯ ಕೇಂದ್ರ ಕಚೇರಿಯಲ್ಲಿನ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ.

6. ಕಚೇರಿ ಪ್ರತಿ.

# <u>ಕರ್ನಾಟಕ ಸರ್ಕಾರದ ನಡವಳಿಗಳು</u>

**ವಿಷಯ:**-ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರಿಗೆ ಅಧಿಕಾರ ಪ್ರತ್ಯಾಯೋಜಿಸುವ ಬಗ್ಗೆ.

**ಓದಲಾಗಿದೆ:**-ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರ ಏಕ ಕಡತ ಸಂಖ್ಯೆ:DPUE-EST3/2/2022-R AND G-DEPARTMENT OF PRE UNIVERSITY EDUCATION (Computer No.888441).

**<u>ಪ್ರಸ್ತಾವನೆ:</u>**

ಮೇಲೆ ಓದಲಾದ ಏಕ ಕಡತದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ನೌಕರರ ವೇತನ ಮುಂಬಡ್ತಿ, ರಜಾ ಮಂಜೂರಾತಿ ಮತ್ತು ಇತರೆ ಸೇವಾ ಷರತ್ತುಗಳ ಸೌಲಭ್ಯಗಳನ್ನು ಮಾರ್ಪಡಿಸಿ ಈ ಸೌಲಭ್ಯಗಳನ್ನು ಮಂಜೂರು ಮಾಡುವ ಅಧಿಕಾರವನ್ನು ಆಯಾ ಜಿಲ್ಲೆಗಳ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಅಧಿಕಾರ ಪ್ರತ್ಯಾಯೋಜಿಸುವ ಬಗ್ಗೆ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯು ರಾಜ್ಯ ಮಟ್ಟದ ಕಚೇರಿಯಾಗಿದ್ದು, 32 ಜಿಲ್ಲಾ ಉಪನಿರ್ದೇಶಕರ ಕಚೇರಿಗಳನ್ನು, 1232 ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು, 824 ಅನುದಾನಿತ ಪದವಿ ಪೂರ್ವ ಕಾಲೇಜುಗಳನ್ನು, 3472 ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳನ್ನು, 161 ಪದವಿಯಿಂದ ಬೇರ್ಪಟ್ಟ ಕಾಲೇಜುಗಳನ್ನು ಹಾಗೂ 16 ಮಹಾನಗರ ಪಾಲಿಕೆ ಕಾಲೇಜುಗಳನ್ನು ಹೊಂದಿರುತ್ತದೆ. ಸದರಿ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರುಗಳು ತಮ್ಮ ಸೇವಾ ಸೌಲಭ್ಯಗಳಿಗಾಗಿ ಬೆಂಗಳೂರಿನ ಕೇಂದ್ರ ಕಚೇರಿಗೆ ಆಗಮಿಸಿ ಹಿಂಬಾಲಿಸುತ್ತಿರುವುದರಿಂದ ಕಾಲೇಜಿನ / ಕಚೇರಿಯ ಕೆಲಸ ಕಾರ್ಯಗಳಿಗೆ ತೀವ್ರವಾದ ಹಿನ್ನಡೆಯಾಗುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ವಿದ್ಯಾರ್ಥಿಗಳ ಪಾಠ-ಪ್ರವಚನಗಳ ಮೇಲೆ ತೀವ್ರತರದ ಪರಿಣಾಮವಾಗುವುದಲ್ಲದೆ ವಿದ್ಯಾರ್ಥಿಗಳ ಮುಂದಿನ ಭವಿಷ್ಯ ರೂಪಿಸುವಲ್ಲಿ ತೊಂದರೆಯಾಗುವುದನ್ನು ತಪ್ಪಿಸುವುದು ಇಲಾಖೆಯ ಕರ್ತವ್ಯ ಮತ್ತು ಜವಾಬ್ದಾರಿಯಾಗಿರುತ್ತದೆ.

ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿನ ಪ್ರಾಂಶುಪಾಲರು, ಉಪನ್ಯಾಸಕರು, ಹಾಗೂ ಇತರೆ ಸಿಬ್ಬಂದಿಗಳು ಮನವಿಗಳ ಮೇರೆಗೆ ಪ್ರಸ್ತುತ ನೌಕರರಿಗೆ ಕಲ್ಪಿಸಿರುವ ಸೌಲಭ್ಯಗಳನ್ನು ಪಡೆಯಲು ಪ್ರಸ್ತಾವನೆಯನ್ನು ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರು ಹಾಗೂ ಜಿಲ್ಲಾ ಉಪ ನಿರ್ದೇಶಕರವರ ಮೂಲಕ ಮಂಜೂರಾತಿಗಾಗಿ ನಿರ್ದೇಶಕರ ಕಚೇರಿಗೆ ಸಲ್ಲಿಸಲಾಗುತ್ತಿದ್ದು, ಈ ಎರಡು ಹಂತದಲ್ಲಿ ಯಾವುದೇ ಶಿಫಾರಸ್ಸು ಇಲ್ಲದೇ ಕೇವಲ ಪ್ರಸ್ತಾವನೆಯನ್ನು ಕಳುಹಿಸುವುದನ್ನು ಗಮನಿಸಲಾಗಿದೆ. ಇದರಿಂದಾಗಿ ಕೇಂದ್ರ ಕಚೇರಿಯಲ್ಲಿ ನಿರ್ಣಯ ತೆಗೆದುಕೊಳ್ಳುವಲ್ಲಿ ವಿಳಂಬವಾಗುತ್ತಿದೆ.

ಆದ್ದರಿಂದ ಪ್ರಾಂಶುಪಾಲರು, ಉಪನ್ಯಾಸಕರ ಮತ್ತು ಬೋಧಕೇತರ ನೌಕರರಿಗೆ ಸೇವಾ ಸೌಲಭ್ಯಗಳನ್ನು ಜಿಲ್ಲಾ ಹಂತದಲ್ಲಿ ತ್ವರಿತಗತಿಯಲ್ಲಿ ದೊರಕಿಸಿಕೊಡುವ ನಿಟ್ಟಿನಲ್ಲಿ ಜಿಲ್ಲಾ ಉಪನಿರ್ದೇಶಕರಿಗೆ ಅಧಿಕಾರವನ್ನು ಪ್ರತ್ಯಾಯೋಜಿಸುವುದು ಸೂಕ್ತವಾಗಿರುವುದಾಗಿ ಹಾಗೂ ಉಪನ್ಯಾಸಕರು ಮತ್ತು ಸಿಬ್ಬಂದಿಗಳು ತಮಗೆ ಲಭ್ಯವಿರುವ ಸೌಲಭ್ಯಗಳನ್ನು ಪಡೆಯಲು ತರಗತಿ ಕೋಣೆಗಳಿಂದ ಹೊರಗುಳಿದು ಕೇಂದ್ರ ಕಚೇರಿಗೆ ಅಲೆದಾಡುವುದನ್ನು ತಪ್ಪಿಸಿ ತನ್ಮೂಲಕ ತರಗತಿಯಲ್ಲಿ ಬೋಧನಾ ಚಟುವಟಿಕೆಗಳಲ್ಲಿ ನಿರಂತರವಾಗಿ ಪಾಲ್ಗೊಂಡು ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವ ಮತ್ತು ಉಪನ್ಯಾಸಕರ/ಸಿಬ್ಬಂದಿಯವರ ಕಾರ್ಯದಕ್ಷತೆ, ಕಾರ್ಯತತ್ಪರತೆಯನ್ನು ಇಮ್ಮಡಿಗೊಳಿಸುವ ಉದ್ದೇಶದಿಂದ ತನ್ಮೂಲಕ ಬೋಧಕ ಮತ್ತು ಇತರೆ ಸಿಬ್ಬಂದಿಗಳು ಶೈಕ್ಷಣಿಕ ಪ್ರಗತಿಯಲ್ಲಿ ಹೆಚ್ಚಿನದ್ದಾಗಿ ತೊಡಗಿಸಿಕೊಳ್ಳುವ ಅವಕಾಶವನ್ನು ಒದಗಿಸಿಕೊಡಲು ಉಪನ್ಯಾಸಕರ ಮತ್ತು ಇದರ ಫಲಾನುಭವಿಗಳಾದ ವಿದ್ಯಾರ್ಥಿಗಳ ಫಲಿತಾಂಶದಲ್ಲಿ ಸುಧಾರಣೆ ತರುವ ಉದ್ದೇಶದಿಂದ ಹಾಗೂ ಉಪನ್ಯಾಸಕರ ಮತ್ತು ಸಿಬ್ಬಂದಿಯವರ ಪ್ರಸ್ತಾವನೆಗಳು ತ್ವರಿತ ಇತ್ಯರ್ಥಕ್ಕೆ ಅನುಕೂಲವಾಗುವಂತೆ ಈ ಕೆಳಕಂಡ

ಸೇವಾ ಸೌಲಭ್ಯಗಳನ್ನು ಜಿಲ್ಲಾ ಉಪನಿರ್ದೇಶಕರ ಹಂತದಲ್ಲಿ ಮಂಜೂರಾತಿ ನೀಡಲು ಅಧಿಕಾರ ಪ್ರತ್ಯಾಯೋಜನೆ ಮಾಡಿ ಆದೇಶ ಹೊರಡಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ.

| ಕ್ರಮ ಸಂಖ್ಯೆ | ಜಿಲ್ಲಾ ಉಪನಿರ್ದೇಶಕರಿಗೆ ಪ್ರತ್ಯಾಯೋಜಿಸಬಹುದಾದ ಅಧಿಕಾರಗಳು |
|---|---|
| 1. | 10 ವರ್ಷಗಳ ಕಾಲಬದ್ಧ ವೇತನ ಬಡ್ತಿ. |
| 2. | 15 ಸ್ವಯಂ ಚಾಲಿತ ವೇತನ ಬಡ್ತಿ. |
| 3. | 20 ವರ್ಷಗಳ ಆಯ್ಕೆಕಾಲಿಕ ವೇತನ ಬಡ್ತಿ. |
| 4. | 25 ವರ್ಷಗಳ ಎರಡನೇ ಹೆಚ್ಚುವರಿ ವೇತನಬಡ್ತಿ |
| 5. | 30 ವರ್ಷಗಳ ಮೂರನೇ ಹೆಚ್ಚುವರಿ ವೇತನ ಬಡ್ತಿ. |
| 6. | 1 ರಿಂದ 8 ವಾರ್ಷಿಕ ಸ್ಥಗಿತ ವೇತನ ಬಡ್ತಿ. |
| 7. | ಎ, ಬಿ, ಸಿ ಮತ್ತು ಡಿ ದರ್ಜೆ ನೌಕರರಿಗೆ ಗರಿಷ್ಠ 4 ತಿಂಗಳವರೆಗೆ ಗಳಿಕೆ ರಜೆ ಮಂಜೂರಾತಿ ನೀಡಲು. |
| 8. | ಪರಿವರ್ತಿತ ರಜೆ ಮಂಜೂರಾತಿ. |
| 9. | ವಿಶೇಷ ಸಾಂದರ್ಭಿಕ ರಜೆ ಮಂಜೂರಾತಿ. |
| 10 | ವಾಹನ ಭತ್ಯೆ ಮಂಜೂರಾತಿ. |
| 11. | ಸಾಮಾನ್ಯ ಭವಿಷ್ಯ ನಿಧಿ ಮುಂಗಡ ಮಂಜೂರಾತಿ (90%) |
| 12. | ಸಾಮಾನ್ಯ ಭವಿಷ್ಯ ನಿಧಿ ಭಾಗಶಃ ಹಿಂಪಡೆದ ಮಂಜೂರಾತಿ (90%) |
| 13. | ಎ, ಬಿ, ಸಿ ಮತ್ತು ಡಿ ದರ್ಜೆ ನೌಕರರಿಗೆ ಪಾಸ್ ಪೋರ್ಟ್ ಪಡೆಯಲು ನಿರಾಕ್ಷೇಪಣೆ ಪ್ರಮಾಣ ಪತ್ರ. |
| 14. | ಉನ್ನತ ಹುದ್ದೆಗೆ ಅರ್ಜಿ ಸಲ್ಲಿಸಲು ನಿರಾಕ್ಷೇಪಣೆ ಪ್ರಮಾಣ ಪತ್ರ ನೀಡುವುದು. |
| 15. | ಅಂತಿಮ ವೇತನ ಪ್ರಮಾಣ ಪತ್ರ. |
| 16. | ಗರಿಷ್ಠ 6 ತಿಂಗಳವರೆಗೆ ಪ್ರಭಾರ ಭತ್ಯೆ ಮಂಜೂರಾತಿ. |
| 17. | ಬಾಕಿ ವೇತನ ಮಂಜೂರಾತಿ. |
| 18. | ಖಾಸಗಿ ಪದವಿ ಪೂರ್ವ ಕಾಲೇಜುಗಳ ಮಾನ್ಯತೆ ನವೀಕರಣ. |

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಪಿ 31 ಟಿಪಿಯು 2023(ಭಾಗ-1) ಬೆಂಗಳೂರು, ದಿನಾಂಕ:17/05/2023**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಬೋಧಕ ಹಾಗೂ ಬೋಧಕೇತರ ಅಧಿಕಾರಿ/ಸಿಬ್ಬಂದಿಗಳಿಗೆ ಈ ಕೆಳಕಂಡ ಸೇವಾ ಸೌಲಭ್ಯಗಳ ಮಂಜೂರಾತಿ ಅಧಿಕಾರವನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ಕೆಳಕಂಡಂತೆ ಆಯಾ ಜಿಲ್ಲೆಯ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಪ್ರತ್ಯಾಯೋಜಿಸಿ ಆದೇಶಿಸಿದೆ.

| ಕ್ರಮ ಸಂಖ್ಯೆ | ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರಿಗೆ ಅಧಿಕಾರ ಪ್ರತ್ಯಾಯೋಜಿಸಲು ಕೋರಿರುವ ವಿಷಯಗಳು | ಅಧಿಕಾರ ಪ್ರತ್ಯಾಯೋಜನೆ ಮತ್ತು ಷರತ್ತು |
|---|---|---|
| 1. | ಕಾಲಬದ್ಧ ಮುಂಬಡ್ತಿ ಸೌಲಭ್ಯಗಳ ಮಂಜೂರಾತಿ. | 1. ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನ್ಯಾಸಕರು ಮತ್ತು ಪ್ರಾಂಶುಪಾಲರನ್ನು ಒಳಗೊಂಡಂತೆ ಎಲ್ಲಾ ಗ್ರೂಪ್-'ಎ' ಮತ್ತು 'ಬಿ' ವೃಂದದ ಮತ್ತು ಕೆಳಗಿನ ವೃಂದದ ನೌಕರರಿಗೆ ವೇತನ ಮುಂಬಡ್ತಿ ಸೌಲಭ್ಯ ಹಾಗೂ ಹೆಚ್ಚುವರಿ ವೇತನ ಮುಂಬಡ್ತಿ ಸೌಲಭ್ಯವನ್ನು |
| 2. | ಹಿರಿಯ ವೇತನ ಶ್ರೇಣಿಗೆ ಸ್ವಯಂ ಚಾಲಿತ ಮುಂಬಡ್ತಿ ಸೌಲಭ್ಯಗಳ ಮಂಜೂರಾತಿ. | |

| | | |
|---|---|---|
| 3. | ಹೆಚ್ಚುವರಿ ವೇತನ ಬಡ್ತಿಯ ಸೌಲಭ್ಯಗಳ ಮಂಜೂರಾತಿ. | ಮಂಜೂರು ಮಾಡುವ ಅಧಿಕಾರವನ್ನು ಅನ್ವಯಿಸುವ ನೇಮಕಾತಿ ಪ್ರಾಧಿಕಾರಿಯಿಂದ ಆಯಾ ಜಿಲ್ಲೆಗಳ ಜಿಲ್ಲಾ ಉಪ-ನಿರ್ದೇಶಕರುಗಳಿಗೆ ಪ್ರತ್ಯಾಯೋಜಿಸಿದೆ.<br><br>ಅದರಂತೆ, ಆಯಾ ಜಿಲ್ಲೆಯ ಜಿಲ್ಲಾ ಉಪ-ನಿರ್ದೇಶಕರುಗಳ ಅಧೀನದಲ್ಲಿ ಕಾರ್ಯ ನಿರ್ವಹಿಸುವ ಗ್ರೂಪ್-'ಎ' ಮತ್ತು ಗ್ರೂಪ್-'ಬಿ' ವೃಂದಗಳನ್ನೊಳಗೊಂಡಂತೆ ಎಲ್ಲಾ ಅಧೀನ ಸಿಬ್ಬಂದಿಗಳಿಗೆ ಜಿಲ್ಲೆಯ ಉಪ-ನಿರ್ದೇಶಕರುಗಳು ಸಕ್ಷಮ ಮಂಜೂರಾತಿ ಪ್ರಾಧಿಕಾರಿಯಾಗಿರುತ್ತಾರೆ.<br><br>2. ಈ ಸೌಲಭ್ಯಗಳನ್ನು ಮಂಜೂರು ಮಾಡುವಲ್ಲಿ ಅನ್ವಯಿಸುವ ಚಾಲ್ತಿ ನಿಯಮ/ಆದೇಶ/ಸ್ಪಷ್ಟೀಕರಣಗಳ ಬೆಳಕಿನಲ್ಲಿ ನಿಯಮಾನುಸಾರ ಪರಿಶೀಲಿಸಿ ಸೂಕ್ತ ನಿರ್ಣಯ ಕೈಗೊಳ್ಳತಕ್ಕದ್ದು.<br><br>3. ಕೆಳ ಹಂತದಲ್ಲಿ ಸದರಿ ಸೇವಾ ಸೌಲಭ್ಯಗಳನ್ನು ಮಂಜೂರು ಮಾಡುವ ಸಂದರ್ಭಗಳಲ್ಲಿ ಒಂದು ಕಛೇರಿಯಿಂದ ಇನ್ನೊಂದು ಕಛೇರಿಯ ಮಧ್ಯೆ ನಿಯಮಗಳನ್ನು ವ್ಯಾಖ್ಯಾನಿಸುವಲ್ಲಿ ವ್ಯತ್ಯಾಸ ಉಂಟಾಗುವುದನ್ನು ತಪ್ಪಿಸಲು ಸದರಿ ಪ್ರಸ್ತಾವನೆಗಳನ್ನು ಇಲಾಖೆಯಲ್ಲಿ ಲಭ್ಯವಿರುವ Online ವ್ಯವಸ್ಥೆ ಮುಖಾಂತರ ಅನುಷ್ಠಾನಗೊಳಿಸತಕ್ಕದ್ದು |
| 4. | ಆಯ್ಕೆ ಕಾಲಿಕ ವೇತನ ಶ್ರೇಣಿ ಸೌಲಭ್ಯಗಳ ಮಂಜೂರಾತಿ. | |
| 5. | ಸ್ಥಗಿತ ವೇತನ ಬಡ್ತಿ ಸೌಲಭ್ಯಗಳ ಮಂಜೂರಾತಿ. | 1. ಗ್ರೂಪ್-'ಎ' ಮತ್ತು 'ಬಿ' ವೃಂದ ನೌಕರರಿಗೆ ಈ ಸೌಲಭ್ಯವನ್ನು ಮಂಜೂರು ಮಾಡುವ ಅಧಿಕಾರವನ್ನು ಅನ್ವಯಿಸುವ ನೇಮಕಾತಿ ಪ್ರಾಧಿಕಾರಿಯಿಂದ ಆಯಾ ಜಿಲ್ಲೆಗಳ ಜಿಲ್ಲಾ ಉಪ-ನಿರ್ದೇಶಕರುಗಳಿಗೆ ಅಧಿಕಾರ ಪ್ರತ್ಯಾಯೋಜಿಸಿದೆ.<br><br>2. ಇತರೆ ವೃಂದಗಳಿಗೆ ಸ್ಥಗಿತ ವೇತನ ಬಡ್ತಿ ಮಂಜೂರಾತಿ ಕುರಿತಂತೆ ದಿನಾಂಕ:18-03-1996ರ ಸರ್ಕಾರಿ ಆದೇಶ ಸಂಖ್ಯೆ:ಆಇ 3 ಎಸ್‌ಆರ್‌ಪಿ 96ರಲ್ಲಿ ನಿಗದಿಪಡಿಸಿರುವ ಸಕ್ಷಮ ಪ್ರಾಧಿಕಾರಿಯ ಬಗ್ಗೆ ಯಾವುದೇ ಬದಲಾವಣೆ ಇರುವುದಿಲ್ಲ.<br><br>3. ಸ್ಥಗಿತ ವೇತನ ಬಡ್ತಿ ಸೌಲಭ್ಯಗಳ ಮಂಜೂರಾತಿಯಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರು ಅಧೀನ ಕಛೇರಿಗಳಿಗೆ ಸವಿಸ್ತಾರವಾದ ಸುತ್ತೋಲೆಯ ಮೂಲಕ ತಿಳಿಸುವುದು.<br><br>4. ಸದರಿ ಪ್ರಸ್ತಾವನೆಗಳನ್ನು ಇಲಾಖೆಯಲ್ಲಿ ಲಭ್ಯವಿರುವ Online ವ್ಯವಸ್ಥೆ ಮುಖಾಂತರ ಅನುಷ್ಠಾನಗೊಳಿಸತಕ್ಕದ್ದು. |

| | | |
|---|---|---|
| 6. | ವಾಹನ ಭತ್ಯೆ ಮಂಜೂರಾತಿ. | 1. ಚಾಲ್ತಿಯಲ್ಲಿರುವ ಸರ್ಕಾರಿ ಆದೇಶ/ ನಿಯಮಗಳನ್ವಯ ಈಗಾಗಲೇ ಲಭ್ಯವಿರುವ ವೃಂದಗಳಿಗೆ ವಾಹನ ಭತ್ಯೆ ಮಂಜೂರು ಮಾಡುವ ಅಧಿಕಾರವನ್ನು ನೇಮಕಾತಿ ಪ್ರಾಧಿಕಾರಿಯಿಂದ ಜಿಲ್ಲಾ ಉಪ-ನಿರ್ದೇಶಕರುಗಳಿಗೆ ಪ್ರತ್ಯಾಯೋಜಿಸಿದೆ.<br>2. ಈ ಅಧಿಕಾರ ಪ್ರತ್ಯಾಯೋಜನೆಯನ್ವಯ ಆಯಾ ಜಿಲ್ಲಾ ಉಪ-ನಿರ್ದೇಶಕರು ಅವರ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ-ಸಿಬ್ಬಂದಿಗಳಿಗೆ ಸೀಮಿತವಾಗಿ ಈ ಸೌಲಭ್ಯವನ್ನು ಮಂಜೂರು ಮಾಡಲು ಸಕ್ಷಮ ಪ್ರಾಧಿಕಾರಿಯಾಗಿರುತ್ತಾರೆ.<br>3. ಈ ಅಧಿಕಾರ ಪ್ರತ್ಯಾಯೋಜನೆಯು ಈಗಾಗಲೇ ವಾಹನ ಭತ್ಯೆ ಲಭ್ಯವಿರುವ ವೃಂದ/ಹುದ್ದೆಗಳಿಗೆ ಮಾತ್ರ ಸೀಮಿತವಾಗಿದ್ದು, ಹೊಸ ಹುದ್ದೆ/ವೃಂದಗಳ ಸೇರ್ಪಡೆ ಮಾಡಿ ಮಂಜೂರು ಮಾಡಲು ಅನ್ವಯಿಸುವುದಿಲ್ಲ. |
| 7. | ಎ, ಬಿ, ಸಿ ಮತ್ತು ಡಿ ದರ್ಜೆ ನೌಕರರಿಗೆ ಪಾಸ್ ಪೋರ್ಟ್ ಪಡೆಯಲು ನಿರಾಕ್ಷೇಪಣೆ ಪ್ರಮಾಣ ಪತ್ರ. | ಎ, ಬಿ, ಸಿ ಮತ್ತು ಡಿ ದರ್ಜೆ ನೌಕರರಿಗೆ ಪಾಸ್ ಪೋರ್ಟ್ ಪಡೆಯಲು ನಿರಾಕ್ಷೇಪಣೆ ಪ್ರಮಾಣ ಪತ್ರ ನೀಡಲು ಅಧಿಕಾರ ಪ್ರತ್ಯಾಯೋಜಿಸಿದೆ.<br>ಮುಂದುವರೆದು, ಈ ಕುರಿತು ಪ್ರಸ್ತುತ ಜಾರಿಯಲ್ಲಿರುವ ಭಾರತ ಸರ್ಕಾರದ ನಿಯಮ/ಸುತ್ತೋಲೆಗಳ ಬೆಳಕಿನಲ್ಲಿ ಶಿಕ್ಷಣ ಇಲಾಖೆಯು ಹೊರಡಿಸಿರುವ ಆದೇಶಗಳಿಗನುಸಾರವಾಗಿ ಕ್ರಮವಹಿಸತಕ್ಕದ್ದು. |
| 8. | ಪ್ರಭಾರ ಭತ್ಯೆ ಮಂಜೂರಾತಿ | ಪ್ರಭಾರ ಭತ್ಯೆ ಮಂಜೂರಾತಿಗೆ ಅಧಿಕಾರ ಪ್ರತ್ಯಾಯೋಜಿಸಿದೆ. ಮುಂದುವರೆದು, ರಾಜ್ಯ ಸರ್ಕಾರಿ ನೌಕರರಿಗೆ ಪ್ರಭಾರ ಭತ್ಯೆ ಮಂಜೂರು ಮಾಡುವ ಕುರಿತು ದಿನಾಂಕ:23-09-2022ರ ಸರ್ಕಾರಿ ಆದೇಶ ಸಂಖ್ಯೆ:ಆಇ 14(ಇ) ಎಸ್.ಆರ್.ಎಸ್ 2022ರಲ್ಲಿ ಮಾರ್ಗಸೂಚಿಗಳನ್ನು ನೀಡಲಾಗಿರುತ್ತದೆ. ಅದರಂತೆ, ನಿರ್ದೇಶನಾಲಯದ ಹಂತದಲ್ಲಿ ಸೂಕ್ತ ಮಾರ್ಗಸೂಚಿಗಳನ್ನೊಳಗೊಂಡ ಸುತ್ತೋಲೆಯನ್ನು ಹೊರಡಿಸುವುದು. |

ಇನ್ನುಳಿದಂತೆ ಕೆಳಕಂಡ ಸೇವಾ ಸೌಲಭ್ಯಗಳ ಮಂಜೂರಾತಿಗೆ ಸಂಬಂಧಿಸಿದ ವಿಷಯಗಳಿಗೆ ಕೆಳಕಂಡಂತೆ ಕ್ರಮವಹಿಸಲು ತಿಳಿಸಿದೆ.

| **ಕ್ರಮ ಸಂಖ್ಯೆ** | **ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರಿಗೆ ಅಧಿಕಾರ ಪ್ರತ್ಯಾಯೋಜಿಸಲು ಕೋರಿರುವ ವಿಷಯಗಳು** | **ಅಧಿಕಾರ ಪ್ರತ್ಯಾಯೋಜನೆ ಮತ್ತು ಷರತ್ತು** |
|---|---|---|
| 1. | ಎ, ಬಿ, ಸಿ ಮತ್ತು ಡಿ ದರ್ಜೆ ನೌಕರರಿಗೆ ಗರಿಷ್ಠ 4 ತಿಂಗಳವರೆಗೆ ಗಳಿಕೆ ರಜೆ ಮಂಜೂರಾತಿ ನೀಡಲು. | 1. ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ 175 ಮತ್ತು ಅನ್ವಯಿಸುವ ನಿಯಮ/ಆದೇಶಗಳಲ್ಲಿನ ಅವಕಾಶಗಳಲ್ಲಿನ ಕಾರ್ಯವಿಧಾನದಂತೆ ನೌಕರರ/ ಅಧಿಕಾರಿಯ ಮೇಲಾಧಿಕಾರಿಯು ರಜೆ ಶಿಫಾರಸ್ಸು / |

| | | |
|---|---|---|
| 2. | ಪರಿವರ್ತಿತ ರಜೆ ಮಂಜೂರಾತಿ. | ಮಂಜೂರಾತಿ ಮಾಡಬಹುದಾಗಿರುತ್ತದೆ.<br><br>ಈ ಕಾರ್ಯವಿಧಾನವನ್ನು ಉಳಿಸಿಕೊಂಡಂತೆ, ಗ್ರೂಪ್-ಎ ಮತ್ತು ಗ್ರೂಪ್-ಬಿ ವೃಂದದ ಅಧಿಕಾರಿಗಳಿಗೆ ದೀರ್ಘಕಾಲದ ರಜೆ ಮಂಜೂರಾತಿಯನ್ನು ಶಿಫಾರಸ್ಸು ಮಾಡುವ ಹುದ್ದೆಯ ಹಂತವನ್ನೊಳಗೊಂಡಂತೆ ಕೇವಲ ಎರಡು ಹಂತಗಳಿಗೆ ಸೀಮಿತಗೊಳಿಸಿ ಸರಳೀಕರಿಸುವ ಕುರಿತಂತೆ ಆರ್ಥಿಕ ಇಲಾಖೆಯು ಹೊರಡಿಸಲಾಗುವ ಸೂಕ್ತ ಕಾರ್ಯವಿಧಾನವನ್ನು ಮಾರ್ಗಸೂಚಿಯನ್ವಯ ಕ್ರಮವಹಿಸುವುದು.<br><br>2. ಸದರಿ ಪ್ರಸ್ತಾವನೆಗಳನ್ನು ಇಲಾಖೆಯಲ್ಲಿ ಲಭ್ಯವಿರುವ Online ವ್ಯವಸ್ಥೆ ಮುಖಾಂತರ ಅನುಷ್ಠಾನಗೊಳಿಸುವುದು.<br><br>3. ಇನ್ನುಳಿದಂತೆ ವಿಶೇಷ ಸಾಂದರ್ಭಿಕ ರಜೆಯನ್ನೂ ಒಳಗೊಂಡಂತೆ ಇತರೆ ರಜಾ ಸೌಲಭ್ಯಗಳನ್ನು ಮಂಜೂರು ಮಾಡುವುದನ್ನು ಅನ್ವಯಿಸುವ ನಿಯಮಾವಳಿಗಳಲ್ಲಿ ನಿಗದಿಪಡಿಸಿರುವ ನಿಬಂಧನೆಗಳನ್ನು ಪರಿಗಣಿಸಿ, ನಿರ್ಧಾರ ಕೈಗೊಳ್ಳತಕ್ಕದ್ದು. |
| 3. | ವಿಶೇಷ ಸಾಂದರ್ಭಿಕ ರಜೆ ಮಂಜೂರಾತಿ. | |
| 4. | ಬಾಕಿ ವೇತನ ಮಂಜೂರಾತಿ. | ಚಾಲ್ತಿಯಲ್ಲಿರುವ ನಿಯಮ/ಆದೇಶಗಳಲ್ಲಿ ನಿಗದಿಪಡಿಸಿರುವ ಕಾಲಮಿತಿಯ ನಿಬಂಧನೆಗಳಿಗೊಳಪಟ್ಟು ಅನ್ವಯಿಸುವ ಮಂಜೂರಾತಿ ಪ್ರಾಧಿಕಾರಿಯೇ ಕ್ರಮವಹಿಸತಕ್ಕದ್ದಾಗಿದ್ದು, ಇದಕ್ಕೆ ಆರ್ಥಿಕ ಇಲಾಖೆಯ ಸಹಮತಿಯನ್ನು ಕಡ್ಡಾಯಗೊಳಿಸಲಾಗಿದೆ. |

ಈ ಮೇಲಿನ ಅಧಿಕಾರ ಪ್ರತ್ಯಾಯೋಜನೆಯು ಈ ಕೆಳಕಂಡ ಸಾಮಾನ್ಯ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟಿರುತ್ತದೆ.

1. ಅಧಿಕಾರ ಪ್ರತ್ಯಾಯೋಜನೆ ಪಡೆದ ಪ್ರಾಧಿಕಾರಿಯು ಸೌಲಭ್ಯಗಳನ್ನು ಮಂಜೂರು ಮಾಡುವಲ್ಲಿ ಚಾಲ್ತಿಯಲ್ಲಿರುವ ನಿಯಮ/ಆದೇಶಗಳ ಪ್ರಕಾರ ಪರಿಶೀಲಿಸಿ ನಿಯಮಾನುಸಾರ ಕ್ರಮವಹಿಸತಕ್ಕದ್ದು.
2. ಒಂದೊಮ್ಮೆ ನಿಯಮಗಳಿಗೆ ವ್ಯತಿರಿಕ್ತವಾಗಿ ಸೌಲಭ್ಯಗಳನ್ನು ಮಂಜೂರು ಮಾಡಿಸಿಕೊಂಡಲ್ಲಿ/ ಮಂಜೂರು ಮಾಡಿದಲ್ಲಿ ಅದನ್ನು ಸರ್ಕಾರಕ್ಕೆ ಹಿಂತಿರುಗಿಸುವ ಒಪ್ಪಿಗೆ ಮುಚ್ಚಳಿಕೆಯನ್ನು ಸಂಬಂಧಿಸಿದ ನೌಕರರಿಂದ ಪಡೆಯತಕ್ಕದ್ದು.

ಉಳಿದಂತೆ ಸಾಮಾನ್ಯ ಭವಿಷ್ಯ ನಿಧಿ ಮುಂಗಡ ಮಂಜೂರಾತಿ(90%) ಮತ್ತು ಸಾಮಾನ್ಯ ಭವಿಷ್ಯ ನಿಧಿ ಭಾಗಶ: ಹಿಂಪಡೆಯಲು ಮಂಜೂರಾತಿ (90%) ಕುರಿತಂತೆ ಅನುಮೋದನೆ / ಮಂಜೂರಾತಿ ನೀಡುವ ಅಧಿಕಾರ ಪ್ರತ್ಯಾಯೋಜನೆಯ ಬಗ್ಗೆ ಆರ್ಥಿಕ ಇಲಾಖೆಯು ನಿಯಮಗಳಿಗೆ ಸೂಕ್ತ ತಿದ್ದುಪಡಿ ತಂದ ನಂತರ ಹಾಗೂ ಅಂತಿಮ ವೇತನ ಪ್ರಮಾಣ ಪತ್ರವನ್ನು ವೇತನ ಬಟವಾಡೆ ಅಧಿಕಾರಿಯೇ ನೀಡುವ ಬಗ್ಗೆ ಮತ್ತು ಇದನ್ನು HRMS ತಂತ್ರಾಂಶದಲ್ಲಿ ಇಂದೀಕರಿಸುವ ಬಗ್ಗೆ ಆರ್ಥಿಕ ಇಲಾಖೆಯು ಸೂಕ್ತ ಕ್ರಮ ಕೈಗೊಂಡ ನಂತರ, ಅದರಂತೆಯೇ ಕ್ರಮವಹಿಸುವುದು.

ಉನ್ನತ ಹುದ್ದೆಗೆ ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡುವ ಅಂಶಕ್ಕೆ ಸಂಬಂಧಿಸಿದಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸಹಮತಿ ದೊರೆತ ನಂತರ ಪ್ರತ್ಯೇಕ ಆದೇಶ ಹೊರಡಿಸಲಾಗುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ :ಆಇ 863 ವೆಚ್ಚ-8/2022 ದಿನಾಂಕ:25-04-2023ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
Padmini S.N 17/5/23
(ಪದ್ಮಿನಿ ಎಸ್.ಎನ್.)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ,
(ಪದವಿ ಪೂರ್ವ ಶಿಕ್ಷಣ).

**ಇವರಿಗೆ:-**

1. ಮಹಾಲೇಖಪಾಲರು (ಎ ಮತ್ತು ಇ) ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 012.
3. ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ-(ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಮುಖಾಂತರ).
4. ಶಾಖಾ ರಕ್ಷಾ ಕಡತ // ಹೆಚ್ಚುವರಿ ಪ್ರತಿಗಳು.